# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./ 623/ಅಂ.ಕಾ.ಅಂ.ವ.ಪು.ಕ್ರೀ.ಕೂ./2019-2020

ದಿನಾಂಕ : 24ನೇ ಡಿಸೆಂಬರ್ 2019
E.mail-dir.deptofphyedn@gmail.com
Ph. No. 0821-2419288

ಗೆ,

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳು

ಮಾನ್ಯರೆ,

ವಿಷಯ : 2019-2020ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ **ಪುರುಷರ ಕ್ರೀಡಾ ಕೂಟದ ಬಗ್ಗೆ.**

* * * * *

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಪುರುಷರ ಕ್ರೀಡಾ ಕೂಟವನ್ನು **ದಿನಾಂಕ : 27-02-2020 ರಿಂದ 28-02-2020ರವರೆಗೆ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು** ಇವರ ಆಶ್ರಯದಲ್ಲಿ ನಡೆಸಲಾಗುವುದು. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಪಂದ್ಯಾವಳಿಗಳಲ್ಲಿ **ಬ್ಯಾಡ್‌ಮಿಂಟನ್ (ಷಟಲ್) ಹ್ಯಾಂಡ್‌ಬಾಲ್, ಬ್ಯಾಸ್ಕೆಟ್‌ಬಾಲ್, ಖೋ-ಖೋ, ಬಾಲ್‌ಬ್ಯಾಡ್‌ಮಿಂಟನ್, ಥ್ರೋಬಾಲ್, ಟೇಬಲ್ ಟೆನ್ನಿಸ್, ಚೆಸ್ ಮತ್ತು ಲಾನ್‌ಟೆನ್ನಿಸ್** ಕ್ರೀಡಾ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಎಲ್ಲಾ ತಂಡಗಳು ಸದರಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಅರ್ಹತೆ ಗಳಿಸಿದ್ದು, ಅರ್ಹತೆ ಗಳಿಸಿದ ಕಾಲೇಜುಗಳ ತಂಡಗಳ ವ್ಯವಸ್ಥಾಪಕರುಗಳ ಸಭೆಯನ್ನು ದಿನಾಂಕ 27ನೇ ಫೆಬ್ರವರಿ 2020 ರಂದು ಬೆಳಗ್ಗೆ 9-00 ಘಂಟೆಗೆ **ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು** ಇಲ್ಲಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಇವರ **ಮೊಬೈಲ್ ಸಂಖ್ಯೆ : 9972045254** ರವರನ್ನು ಸಂಪರ್ಕಿಸಲು ಕೋರಲಾಗಿದೆ.

**ವಿಶೇಷ ಸೂಚನೆ : ಕ್ರಿಕೆಟ್ ಮತ್ತು ಪುಟ್‌ಬಾಲ್ ಪಂದ್ಯಾವಳಿಯಲ್ಲಿ ವಲಯ ಮಟ್ಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳಿಗೆ ದಿನಾಂಕ : 18-02-2020 ರ ಬೆಳಗ್ಗೆ 8-00 ಘಂಟೆಗೆ** ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್‌ನ ಕ್ರೀಡಾಂಗಣದಲ್ಲಿ ಸದರಿ ಪಂದ್ಯಾವಳಿಗಳನ್ನು ಪ್ರಾರಂಭಿಸಲಾಗುವುದು. **ದಿನಾಂಕ: 19.02.2020ರಂದು ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿಗಳನ್ನು ಬೆಳಗ್ಗೆ 8.00ಘಂಟೆಗೆ** ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಹಾಗೂ **ದಿನಾಂಕ: 22.02.2020ರಂದು ಬೆಳಗ್ಗೆ 8.00ಘಂಟೆಗೆ ಹಾಕಿ ಮತ್ತು ಥ್ರೋಬಾಲ್ ಕ್ರೀಡೆಗಳನ್ನು** ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆಸಲಾಗುವುದು. ಸದರಿ ಪಂದ್ಯಾವಳಿಗಳಿಗೆ ಅರ್ಹತೆ ಗಳಿಸಿದ ತಂಡಗಳು ಪಂದ್ಯಾವಳಿ ನಡೆಯುವ ದಿನಾಂಕದ ಹಿಂದಿನ ದಿನ ದೈಹಿಕ ಶಿಕ್ಷಣ ವಿಭಾಗದಲ್ಲಿ ವಸತಿ ಸೌಲಭ್ಯವನ್ನು ಪಡೆಯಲು ಸೂಚಿಸಲಾಗಿದೆ.

ಹೊರಗಡೆಯಿಂದ ಬರುವ ಕಾಲೇಜುಗಳ ತಂಡಗಳಿಗೆ 26ನೇ ಫೆಬ್ರವರಿ 2020ರ ಮಧ್ಯಾಹ್ನ 3-00 ಘಂಟೆಯಿಂದ **ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ** ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು. **ತಂಡಗಳಿಗೆ ವಸತಿ ಸೌಕರ್ಯ ನೀಡಲು ತಂಡಗಳ ಜೊತೆಯಲ್ಲಿ ವ್ಯವಸ್ಥಾಪಕರು ಕಡ್ಡಾಯವಾಗಿರಬೇಕು ಹಾಗೂ ವಿದ್ಯಾರ್ಥಿಗಳ ಜೊತೆಯಲ್ಲೇ ವಸತಿ ಸೌಕರ್ಯವನ್ನು ತಂಡದ ವ್ಯವಸ್ಥಾಪಕರಿಗೂ ಕಲ್ಪಿಸಲಾಗುವುದು. ಆದುದರಿಂದ ತಂಡದ ಜೊತೆಯಲ್ಲೇ ವ್ಯವಸ್ಥಾಪಕರು ಕಡ್ಡಾಯವಾಗಿರಬೇಕು.** ವಸತಿ ಸೌಕರ್ಯ ಪಡೆಯಲು ರೂ. 500-00 (ಐದುನೂರು ರೂಪಾಯಿಗಳು) ಎಚ್ಚರಿಕೆ ಹಣವನ್ನು ವಸತಿ ವ್ಯವಸ್ಥೆಯ ಅಧಿಕಾರಿಯವರಲ್ಲಿ ಸಂದಾಯ ಮಾಡಬೇಕು. ಸದರಿ ಹಣವನ್ನು ಪಂದ್ಯಾವಳಿ ಮುಗಿದ ನಂತರ ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ ಹಿಂದಿರುಗಿಸಲಾಗುವುದು.

**ಕ್ರೀಡಾಕೂಟದಲ್ಲಿ ಭಾಗವಹಿಸುವ ವಿವಿಧ ಕಾಲೇಜಿನ ಕ್ರೀಡಾ ತಂಡಗಳು ಕ್ರೀಡೆ ನಡೆಯುವ ಸಮಯದಲ್ಲಿ ಹಾಗೂ ವಸತಿ ಸೌಕರ್ಯ ಒದಗಿಸಿರುವ ಜಾಗದಲ್ಲಿ ಶಿಸ್ತು ಸಂಯಮ ಹಾಗೂ ಸಮಯ ಪಾಲನೆಗೆ ಹೆಚ್ಚು ಮಹತ್ವವನ್ನು ನೀಡಲು ಆಯೋಜಕರು ತೀರ್ಮಾನಸಿದ್ದು, ಇದನ್ನು ಉಲ್ಲಂಘಿಸಿದ ಕ್ರೀಡಾ ತಂಡಗಳನ್ನು ಕ್ರೀಡಾಕೂಟದಿಂದ ಹಾಗೂ ವಸತಿ ನಿಲಯದಿಂದ ಹೊರ ಹಾಕಲಾಗುವುದು. ಆದುರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಕ್ರೀಡಾಪಟುಗಳಿಗೆ ಕ್ರೀಡಾಕೂಟದ ಸಮಯದಲ್ಲಿ ಶಿಸ್ತಿನಿಂದ ವರ್ತಿಸಲು ಆದೇಶಿಸಬೇಕಾಗಿ ಕೋರಿಕೆ. ಯಾವುದೇ ತಂಡ ಅಶಿಸ್ತಿನಿಂದ ವರ್ತಿಸಿದರೆ ಆ ತಂಡದ ವ್ಯವಸ್ಥಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜಿನ ಪ್ರಾಂಶುಪಾಲರು ಹೊಣೆಯಾಗಿರುತ್ತಾರೆ. ಮೇಲಿನ ಅಂಶವನ್ನು ಅತ್ಯಂತ** ಗಂಭೀರವಾಗಿ ಪರಿಗಣಿಸಲು **ಕೋರಲಾಗಿದೆ.**

ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಆಟಗಾರರು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನಿಗದಿಪಡಿಸಿರುವ ನಮೂನೆಯಲ್ಲಿ ಇತ್ತೀಚಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರುಗಳ ಸಹಿ ಮತ್ತು ಮೊಹರು ಇರುವ "**ಗುರುತಿನ ಚೀಟಿ**"ಯನ್ನು ಕಡ್ಡಾಯವಾಗಿ ಹೊಂದಿರಬೇಕು, ಇಲ್ಲದಿದ್ದಲ್ಲಿ ಆಟಗಾರರಿಗೆ ಪಂದ್ಯಗಳಲ್ಲಿ ಭಾಗವಹಿಸಲು ಬಿಡುವುದಿಲ್ಲ.

2019-20ನೇ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪಂಧ್ಯಾವಳಿಳೀಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಯತಾವತ್ತಾಗಿ ಅಳವಡಿಸಿಕೊಂಡಿರುವುದರಿಂದ ಭಾಗವಹಿಸುವ ತಂಡದ ಆಟಗಾರರು ನಿಗದಿಪಡಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ ಹಾಗೂ ಆಟಗಾರರ ಅರ್ಹತಾ ದಾಖಲೆಯ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸಲು ಸೂಚಿಸಲಾಗಿದೆ.

ಮೇಲಿನ ಸೂಚನೆಗಳನ್ನು ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ತಮ್ಮ ಕಾಲೇಜಿನ ತಂಡಗಳ ವ್ಯವಸ್ಥಾಪಕರು ಹಾಗೂ ಆಟಗಾರರು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಈ ಕ್ರೀಡಾಕೂಟದ ಯಶಸ್ಸಿಗೆ ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

P. [signature] 24/12/2019

(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 570 005

**ಪ್ರತಿಗಳನ್ನು ವಂದನಾಪೂರ್ವಕವಾಗಿ :**

1. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳು ತಮ್ಮ ವಲಯದ [illegible] ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಲಯ ಮಟ್ಟದ ಪಂದ್ಯಾವಳಿಗಳ ಫಲಿತಾಂಶದ ಪಟ್ಟಿಯನ್ನು [illegible] ನಿರ್ದೇಶಕರಿಗೆ ದಿನಾಂಕ : 01-02-2020 ರೊಳಗೆ ತಲುಪಿಸಲು ಕೋರಲಾಗಿದೆ. ಈ ಪತ್ರವನ್ನು ತಮ್ಮ ಮಾಹಿತಿ [illegible] ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

P.T.O

**2019-2020ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಪುರುಷರ ಕ್ರೀಡಾ ಕೂಟದ ಬಗ್ಗೆ.**

| ಕ್ರೀಡೆಗಳು | ನಡೆಯುವ ದಿನಾಂಕ ಮತ್ತು ಸಮಯ | ನಡೆಯುವ ಸ್ಥಳ | ವಸತಿ ವ್ಯವಸ್ಥೆ |
|---|---|---|---|
| 1. ಕ್ರಿಕೆಟ್<br>2. ಫುಟ್‌ಬಾಲ್ | 18 ಮತ್ತು 19 ಫೆಬ್ರವರಿ 2020<br>ಬೆಳಿಗ್ಗೆ 8-00ಘಂಟೆಗೆ | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| 1. ಕಬಡ್ಡಿ<br>2. ವಾಲಿಬಾಲ್ | 19 ಫೆಬ್ರವರಿ 2020<br>ಬೆಳಿಗ್ಗೆ 8-00ಘಂಟೆಗೆ | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| 1. ಹಾಕಿ<br>2. ಥ್ರೋಬಾಲ್ | 22 ಫೆಬ್ರವರಿ 2020<br>ಬೆಳಿಗ್ಗೆ 8-00ಘಂಟೆಗೆ | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| 1. ಬ್ಯಾಡ್‌ಮಿಂಟನ್ (ಷಟಲ್)<br>2. ಹ್ಯಾಂಡ್‌ಬಾಲ್<br>3. ಬ್ಯಾಸ್ಕೆಟ್‌ಬಾಲ್<br>4. ಖೋ-ಖೋ<br>5. ಬಾಲ್‌ಬ್ಯಾಡ್ ಮಿಂಟನ್<br>6. ಟೇಬಲ್ ಟೆನ್ನಿಸ್<br>7. ಸಾಫ್ಟ್‌ಬಾಲ್<br>8. ಚೆಸ್<br>9. ಲಾನ್ ಟೆನ್ನಿಸ್ | 27 ಮತ್ತು 28 ಫೆಬ್ರವರಿ 2020<br>ಬೆಳಿಗ್ಗೆ 8-00ಘಂಟೆಗೆ | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |

ವಿಶೇಷ ಸೂಚನೆ:

1. ದಿನಾಂಕ: 27.02.2020ರ ಬೆಳಿಗ್ಗೆ 8.30ಘಂಟೆಗೆ ಪಂದ್ಯಾವಳಿಯ ಉದ್ಘಾಟನಾ ಸಮಾರಂಭವನ್ನು ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿದ್ದು, ಪಂದ್ಯಾವಳಿಯಲ್ಲಿ ಭಾಗವಹಿಸಲು ಅರ್ಹತೆ ಗಳಿಸಿರುವ ಕಾಲೇಜಿನ ಕ್ರೀಡಾಪಟುಗಳು ಕಡ್ಡಾಯವಾಗಿ ಕಾಲೇಜಿನ ಧ್ವಜದೊಂದಿಗೆ ಪಥಸಂಚಲನೆಯಲ್ಲಿ ಭಾಗವಹಿಸುವಂತೆ ಸೂಚಿಸಲಾಗಿದೆ.

2. ಕಬ್ಬಡಿ ಪಂದ್ಯಾವಳಿಯನ್ನು ಕಬ್ಬಡಿ ಸಿಂಥಟಿಕ್ ಮ್ಯಾಟ್ ಅಂಕಣದಲ್ಲಿ ಆಡಿಸಲಾಗುವುದು ಭಾಗವಹಿಸುವ ಆಟಗಾರರು ಸಿಂಥಟಿಕ್ ಮ್ಯಾಟ್‌ನಲ್ಲಿ ಆಡಲು ಅವಶ್ಯವಿರುವ ವೈಯಕ್ತಿಕ ಸಲಕರಣೆಗಳನ್ನು ಸಿದ್ದಪಡಿಸಿಕೊಂಡು ಪಂದ್ಯಾವಳಿಯಲ್ಲಿ ಭಾಗವಹಿಸಲು ಸೂಚಿಸಲಾಗಿದೆ.